## ‘ಅವರೇ’ ಪುರಾಣ!

ಸಾಮಾನ್ಯವಾಗಿ ಹೆಂಡತಿಯನ್ನು ಗಂಡ ಬಹುವಚನದಲ್ಲಿ ಸಂಬೋಧಿಸುವುದು ನಮ್ಮಲ್ಲಿ ಕಡಿಮೆ. ಆದರೆ ಕನ್ನಡ ಧಾರಾವಾಹಿಗಳಲ್ಲಿ ಅದು ಹೇಗೋ ನುಸುಳಿಕೊಂಡುಬಿಟ್ಟಿದೆ. ಝೀ ಕನ್ನಡದ ‘ಶ್ರೀರಸ್ತು ಶುಭಮಸ್ತು’ವಿನಲ್ಲಿ ಮಾಧವ, ತುಳಸಿಯನ್ನು ಹಾಗೂ ‘ಅಮೃತಧಾರೆ’ಯ ಭೂಮಿಕಾಳನ್ನು ಗೌತಮ ಬಹುವಚನದಲ್ಲಿಯೇ ಮಾತನಾಡಿಸುವುದು ಕೃತಕವೆನಿಸುತ್ತದೆ. ಅದೇ ರೀತಿ ಗಂಡನ ಹೆಸರು ಹಿಡಿದು ಕರೆಯುವ ಪದ್ಧತಿಯೂ ನಮ್ಮಲ್ಲಿ ಇಲ್ಲ. ತುಳಸಿ ಮತ್ತು ಭೂಮಿಕಾ ತಮ್ಮ ಗಂಡಂದಿರನ್ನು ‘ಮಾಧವೋರೆ’, ‘ಗೌತಮೋರೆ’ ಎಂದು ಪದೇ ಪದೇ ಕರೆಯುವುದು ತೀರಾ ಅಸಹಜ.

—ವಾ. ಮುರಳೀಧರ, ತೀರ್ಥಹಳ್ಳಿ

## ಭಗವಂತನ ಕಾಡುವ ನಿರ್ಗಮನ

ಝೀ ಕನ್ನಡದ ‘ಭೂಮಿಗೆ ಬಂದ ಭಗವಂತ’ ಧಾರಾವಾಹಿ ಕ್ರೌರ್ಯ, ಕಪಟತನದಿಂದ ದೂರವಾಗಿತ್ತು. ಈ ಧಾರಾವಾಹಿಯನ್ನು ಮುಜುಗರ ಇಲ್ಲದೆ ಮನೆ ಮಂದಿಯೆಲ್ಲ ಒಟ್ಟಾಗಿ ಕುಳಿತು ಮುಗಿಯುವ ತನಕ ನೋಡಿದ್ದೇವೆ. ಈಗ ಇಷ್ಟು ಬೇಗ ಮುಗೀತಾ ಎಂದು ಅಚ್ಚರಿಯಾಗುತ್ತಿದೆ. ಇನ್ನಷ್ಟು ದಿನ ಬಂದಿದ್ದರೂ ಚೆನ್ನಾಗಿರುತ್ತಿತ್ತು. ಸಣ್ಣ ಸಂಗತಿಗಳನ್ನೂ ಭಗವಂತನ ಮೂಲಕ ಸರಳವಾಗಿ ಅರ್ಥ ಮಾಡಿಸುವ ಬಗೆ ಚೆನ್ನಾಗಿತ್ತು. ಆ ಮೂಲಕ ಜೀವನ ಮೌಲ್ಯಗಳನ್ನು ನಮ್ಮ ಮನಸ್ಸಿಗೆ ದಾಟಿಸಿದ್ದಾರೆ. ಅದಕ್ಕಾಗಿ ಆ ತಂಡಕ್ಕೆ ನಮ್ಮ ಮೆಚ್ಚುಗೆ ಇದೆ.

—ವಿಭಾ ಮುರಳೀಧರ್, ತುಮಕೂರು

## ಕಳೆಗುಂದಿದೆ ‘ಹೊಂಗನಸು’

ಸ್ಟಾರ್ ಸುವರ್ಣದ ‘ಹೊಂಗನಸು’ ಧಾರಾವಾಹಿಯ ಕಥೆ ಹಳಿತಪ್ಪಿದೆ. ನಾಯಕಿ ವಸುಧಾ, ತನ್ನ ಗಂಡ ಅಸುನೀಗಿದ್ದಾನೆ ಎಂದು ಹೇಳಿದರೂ ಒಪ್ಪಲಿಲ್ಲ. ಹುಡುಕುತ್ತೇನೆ ಎಂದವಳು ಇದುವರೆಗೆ ಆ ಪ್ರಯತ್ನವನ್ನೇ ಮಾಡಿಲ್ಲ.

ಶೈಲೇಂದ್ರ, ಎಂಡಿ ಪದವಿ ಪಡೆಯಲು ಮಾಡಿದ ಕುತಂತ್ರಗಳೆಲ್ಲ ಬುಡಮೇಲಾಗುತ್ತವೆ. ಅನುಪಮಾ ಪಾತ್ರ ತುಂಬ ಶೋಚನೀಯವಾಗಿದೆ. ಆಕೆಯ ಮಗನೇ ತನ್ನ ತಂದೆ ಯಾರೆಂದು ಕೇಳಿದರೂ ಹೇಳುತ್ತಿಲ್ಲ. ಆಕೆ ಅಪಾರ ಅಪಮಾನ ಅನುಭವಿಸುತ್ತಿದ್ದಾಳೆ. ಇಂತಹ ಅಸಹಾಯಕ ಪಾಪದ ಪಾತ್ರ ಏನನ್ನು ಹೇಳ ಹೊರಟಿದೆ? ಅದರ ಅಗತ್ಯ ಏನಿದೆ ಅನ್ನುವುದೇ ಚಿದಂಬರ ರಹಸ್ಯ. ಸಮಸ್ಯೆಗಳಿಗೆ ಉತ್ತರ ಹುಡುಕದಿದ್ದರೂ ಧಾರಾವಾಹಿ ಮಾತ್ರ ಮುಂದೆ ಸಾಗುತ್ತಲೇ ಇದೆ.

—ಶರ್ಮಿಷ್ಠಾ ವೇದಗರ್ಭ, ಬೆಂಗಳೂರು

ವಾರದ ಪತ್ರ

## ನೋಟ್ ಬರಹ ನಿಷಿದ್ಧ

ನೋಟುಗಳ ಮೇಲೆ ಬರೆಯುವುದು ಜನರಿಗೆ ಅಭ್ಯಾಸವಾಗಿದೆ. ಯಾರದೋ ಮೊಬೈಲ್ ನಂಬರ್ ಸೇರಿದಂತೆ ಚಿತ್ರ ವಿಚಿತ್ರ ಬರಹಗಳಿರುವ ನೋಟುಗಳನ್ನು ಗಮನಿಸಿದ್ದೇನೆ. ಪೇಪರ್ ಬದಲು ನೋಟಿನ ಮೇಲೆ ಬರೆಯುವವರು ಅದೆಷ್ಟೋ ಮಂದಿ ಇದ್ದಾರೆ. ಈ ಹಿಂದೆ ಪ್ರೇಮಿಗಳಿಗೆ ತಮ್ಮ ಫೋನ್ ನಂಬರ್ ಬದಲಾಯಿಸುವ ಸಾಧನವೇ ನೋಟಾಗಿತ್ತು.

ಕಲರ್ಸ್ ಕನ್ನಡದ ‘ಶ್ರೀಗೌರಿ’ಯಲ್ಲಿ ಕಾಲೇಜಿನ ವಿದ್ಯಾರ್ಥಿನಿ ಒಬ್ಬಳು ದೇಣಿಗೆ ಡಬ್ಬಾ ಹಿಡಿದು ಬಡಮಕ್ಕಳ ಸಹಾಯಕ್ಕೆ ಹಣ ಸಂಗ್ರಹ ಮಾಡುತ್ತಿರುತ್ತಾಳೆ. ಆಕೆ ಸುತ್ತಾಡುತ್ತಾ ನಾಯಕ ಅಪ್ಪು ಬಳಿ ಕೇಳುತ್ತಾಳೆ. ಆತನ ಬಳಿ ಡೊನೇಷನ್ ನೀಡಲು ಹಣ ಇರುವುದಿಲ್ಲ. ಅಷ್ಟು ಹೊತ್ತಿಗೆ ಸರಿಯಾಗಿ ನಾಯಕಿ ಶ್ರೀಗೌರಿ ಅಲ್ಲಿಗೆ ಬರುತ್ತಾಳೆ. ಐದು ನೂರು ರೂಪಾಯಿ ನೋಟಿನ ಮೇಲೆ ಪೆನ್ನಿನಿಂದ ‘ಶ್ರೀ’ ಎಂದು ಬರೆದು ಡೊನೇಷನ್ ಡಬ್ಬಾದಲ್ಲಿ ಹಾಕುತ್ತಾಳೆ. ಇದು ತಪ್ಪು. ಕರೆನ್ಸಿ ನೋಟುಗಳ ಮೇಲೆ ಬರೆಯದಂತೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ವಿನಂತಿಸಿದೆ. ಬರವಣಿಗೆಯಿಂದ ನೋಟುಗಳು ವಿರೂಪಗೊಳ್ಳುತ್ತವೆ ಹಾಗೂ ಅವುಗಳ ಜೀವಿತಾವಧಿ ಕಡಿಮೆ ಆಗುತ್ತದೆ. ಇಂಥ ಸೂಕ್ಷ್ಮಗಳನ್ನು ನಿರ್ದೇಶಕರು ಮರೆಯಬಾರದು.

—ರಘುನಾಥರಾವ್ ತಾಪ್ಸೆ, ದಾವಣಗೆರೆ



## ಸೂಪರ್ ಪುಟಾಣಿ ಜೋಡಿ

ಝೀ ಕನ್ನಡದ ‘ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್’ನಲ್ಲಿ ದೊಡ್ಡವರ ಡಾನ್ಸ್ ನಡುವೆ ಪುಟಾಣಿಗಳಾದ ಸಿಹಿ ಮತ್ತು ಸುಮಂತ್ ಜೋಡಿಯು, ‘ಗೀತಾ’ ಸಿನಿಮಾದ ‘ಏನೇ ಕೇಳು ಕೊಡುವೆ ನಿನಗೆ ನಾನೀಗ...’ ಡಾನ್ಸ್ ಸೂಪರ್ ಆಗಿತ್ತು. ನಟನೆ, ಡಾನ್ಸ್, ಜಂಪಿಂಗ್, ಟೈಮಿಂಗ್ ವೀಕ್ಷಕರ ಮನ ಗೆದ್ದಿತು. ಮಂಜು ಮಾಸ್ಟರ್ ತರಬೇತಿಯಲ್ಲಿ ಮಕ್ಕಳು ಪಾದರಸದಂತೆ ಮಿಂಚಿದ್ದು ಖುಷಿ ಆಯಿತು. ಪುಟಾಣಿಗಳ ಚೇತೋಹಾರಿ ಡಾನ್ಸ್ ದೊಡ್ಡವರನ್ನೂ ನಾಚಿಸುವಂತಿತ್ತು. ಎಲ್ಲರಿಗೂ ಸ್ಫೂರ್ತಿದಾಯಕವಾಗಿತ್ತು. ಮನೆ ಮಂದಿಯೆಲ್ಲಾ ಒಟ್ಟಿಗೇ ಕೂತು ಖುಷಿಪಟ್ಟ ರಸನಿಮಿಷ ಇದಾಗಿತ್ತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ನೃತ್ಯ ಸರ್ಕಸ್ ಆದರೆ ಹೇಗೆ?

ಝೀ ಕನ್ನಡದ ‘ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್’ ಸ್ಪರ್ಧಿಗಳಲ್ಲಿ ‘ಮಹಾನಟಿ’ ಶೋನಿಂದ ಬಂದಿರುವ ಚಿತ್ರದುರ್ಗದ ಗಗನಾ, ‘ಬಿಗ್ ಬಾಸ್’ನ ಆರ್ಯವರ್ಧನ್, ಮಿಮಿಕ್ರಿ ಗೋಪಿ, ಗಾಯಕಿ ರೆಮೋ ಅವರು ತಮ್ಮ ಸಹಸ್ಪರ್ಧಿಗಳ ಜೊತೆ ಡಾನ್ಸ್ ಮಾಡಲು ಶಕ್ತಿಮೀರಿ ಶ್ರಮಿಸುತ್ತಿದ್ದಾರೆ. ತಮ್ಮದಲ್ಲದ ಕಲಾ ಪ್ರಕಾರ ಸ್ಪರ್ಧೆಯಲ್ಲಿ ಭಾಗವಹಿಸಿ ಸರ್ಕಸ್‌ನಂತೆ ದೇಹ ದಂಡಿಸಿ ಡಾನ್ಸ್ ಮಾಡುತ್ತಿರುವ ಅವರ ಉತ್ಸಾಹ ಮೆಚ್ಚುವಂತಹದ್ದು. ಆದರೆ ನೃತ್ಯವನ್ನು ನೃತ್ಯದಂತೆ ಮಾಡಿದರೆ ಶೋನ ಘನತೆ ಹೆಚ್ಚುತ್ತದೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಮದುವೆಗೆ ಬೇಕು ನೈತಿಕ ಸ್ಪರ್ಶ

ಕಲರ್ಸ್ ಕನ್ನಡದ ‘ರಾಮಾಚಾರಿ’ ಧಾರಾವಾಹಿಯನ್ನು ಕುಟುಂಬದವರೆಲ್ಲ ನೋಡುತ್ತೇವೆ. ರಾಮಾಚಾರಿ–ಚಾರುಲತಾಳನ್ನು ಮದುವೆಯಾಗಿ ಸಂಸಾರವನ್ನು ಆನಂದದಿಂದ ನಡೆಸುತ್ತಿದ್ದ. ಇತ್ತೀಚಿನ ಕಂತಿನಲ್ಲಿ ಅವರು ಮದುವೆ ಆಗಿರುವುದೇ ಸುಳ್ಳು ಎನ್ನುವ ವಾದಸರಣಿ ಆರಂಭವಾಗಿದೆ. ಕೆಲಸಕ್ಕೆ ಬಾರದ ಇಂತಹ ವಿಷಯಗಳನ್ನು ಆಕಸ್ಮಿಕವಾಗಿ ತಂದು ಕಥೆಯನ್ನು ಮುಂದುವರಿಸುವ ತಂತ್ರಗಾರಿಕೆ ಸಮಂಜಸವಲ್ಲ.

ರಾಜ್‌ಕುಮಾರ್ – ಬಿ. ಸರೋಜಾ ದೇವಿ ಜೋಡಿಯ ‘ನ್ಯಾಯವೇ ದೇವರು’ ಸಿನಿಮಾದ ‘ಆಕಾಶವೇ ಬೀಳಲಿ ಮೇಲೆ...’ ಗೀತೆ ದಾಂಪತ್ಯದ ಬೆಸುಗೆಯ ಗಟ್ಟಿತನಕ್ಕೆ ನಿದರ್ಶನದಂತಿದೆ. ಯಾವ ರೂಪದಲ್ಲೇ ಮದುವೆ ಆಗಿದ್ದರೂ ಅದಕ್ಕೊಂದು ನೈತಿಕ ಮೌಲ್ಯವನ್ನು ತುಂಬುವುದು ಅಗತ್ಯ. ಇದರ ಬದಲು, ಅಪಸ್ವರ ಎತ್ತುವುದು, ಮತ್ತೆ ಮದುವೆ ಮಾಡಹೊರಡುವುದು ಸರಿಯಲ್ಲ.

—ವಾಸುದೇವ, ಹಾಸನ

